**ದಿನಾಂಕಃ 29.04.2025** ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ವಾದಿ ಪರ ವಕೀಲರಿಂದಃ**

ಈಗ ನ್ಯಾಯಾಲಯದ ಮುಂದೆ ನೋಡುತ್ತಿರುವ ನಿಡಿ–24 ದಾನ ಪತ್ರ ನೊಂದಣಿಯಾಗಿದೆ ಎಂದರೆ ಸರಿ. ದಾವಾ ಸ್ವತ್ತಿನ ಐಟಂ ನಂ.4 ನನ್ನ ತಾಯಿ ಮತ್ತು ತಂದೆಯವರಿಗೆ ಹೇಗೆ ಬಂತು ಎಂದು ನನಗೆ ಗೊತ್ತಿಲ್ಲ. ಈ ದಾವೆಯ 4 ನೇ ಪ್ರತಿವಾದಿ ನನ್ನ ತಾಯಿಯಾಗಿರುತ್ತಾರೆ. ಪ್ರಸ್ತುತ ದಾವೆ ಹೂಡಿದಾಗ ನನ್ನ ತಾಯಿ ಜೀವಂತ ಇದ್ದರು ಎಂದರೆ ಸರಿ. ನನ್ನ ತಾಯಿ ಮರಣ ಹೊಂದಿದ ನಂತರ ನನ್ನ ತಂದೆ ಹಾಗೂ ನನ್ನ ಸಹೋದರನನ್ನು ನನ್ನ ತಾಯಿಯ ವಾರಸ್ಸುದಾರರಾಗಿ ಈ ದಾವೆಯಲ್ಲಿ ಸೇರಿಸಿದ್ದಾರೆ ಎಂದರೆ ಸರಿ. ನನ್ನ ಮದುವೆಯಾಗಿ ಹತ್ತು ವರ್ಷಗಳಾಗಿದೆ. ನಾನು ಮೂರ ನಾಲ್ಕು ವರ್ಷಗಳಿಂದ ತುಮಕೂರಿನಲ್ಲಿ ವಾಸಿಸುತ್ತಿದ್ದೇನೆ. ದಾವಾ ಸ್ವತ್ತಿನ ಐಟಂ ನಂ.4 ಎಲ್ಲಿದೆ ಎಂದು ನನಗೆ ಗೊತ್ತಿಲ್ಲ ಹಾಗೂ ನಾನು ನೋಡಿಲ್ಲ. ಸದರಿ ಸ್ವತ್ತಿನ ವಿಸ್ತೀರ್ಣ ಹಾಗೂ ಚಕ್ಕುಬಂದಿ ನನಗೆ ಗೊತ್ತಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರೆದು, ಖಾತೆ ನಂಬರ್ ಮಾತ್ರ ಗೊತ್ತಿದೆ ಎಂದು ನುಡಿದಿರುತ್ತಾರೆ. ನಾನು 9 ನೇ ತರಗತಿವರೆಗೂ ಓದಿರುತ್ತೇನೆ. ನಿಡಿ–7 ಅನ್ನು ಸಾಕ್ಷಿಗೆ ತೋರಿಸಲಾಗಿ ಅದು ಯಾವ ದಾಖಲೆ ಎಂದು ವಕೀಲರು ಕೇಳಿದಾಗ ಸಾಕ್ಷಿಯು ಸದರಿ ದಾಖಲೆಯನ್ನು ನೋಡಿ ನನ್ನ ತಾಯಿ ಖರೀದಿಸಿದ ಪತ್ರ ಎಂದು ನುಡಿದಿರುತ್ತಾರೆ . ವಾದಿ ತಂದೆ ರಾಮಯ್ಯ ನವರಿಗೆ ಮೂರು ಜನ ಮಕ್ಕಳು ಎಂದರೆ ಸರಿ. ಮೂರು ಜನ ಮಕ್ಕಳು ಜೀವಂತ ಇದ್ದಾರೆ ಎಂದರೆ ಸರಿ. ನಿಡಿ–24 ನನ್ನ ಹೆಸರಿಗೆ ನೊಂದಣಿಯಾಗುವಾಗ ನಾನು ಯಾವುದೇ ದಾಖಲೆಗಳನ್ನು ನೋಡಿಲ್ಲ ಎಂದರೆ ಸರಿ. ನನ್ನ ತಾಯಿಯವರು ನನ್ನ ಹೆಸರಿಗೆ ಮಾಡಿಸಿಕೋ ಎಂದು ಹೇಳಿದ ಕಾರಣ ನಾನು ನನ್ನ ಹೆಸರಿಗೆ ಮಾಡಿಸಿಕೊಂಡೆ ಎಂದರೆ ಸರಿ. ದಾವಾ ಐಟಂ ನಂ.4 ರಾಮಯ್ಯನ ಒಟ್ಟು ಕುಟುಂಬದ ಆಸ್ತಿ ಎಂದರೆ ಸರಿ. ಸದರಿ ಸ್ವತ್ತನ್ನು ರಾಮಯ್ಯನವರು ವಿಭಾಗ ಮಾಡಿಕೊಂಡಿಲ್ಲ ಎಂದರೆ ನನಗೆ ಗೊತ್ತಿಲ್ಲ ಎಂದರೆ ಸರಿ. 2 ನೇ ಪ್ರತಿವಾದಿ ಮತ್ತು ನನ್ನ ತಾಯಿ ರೂ.50 ಸ್ಟ್ಯಾಂಪ್ ಪೇಪರ್ ನಲ್ಲಿ (ನಿಪಿ–7) ಬರೆಸಿಕೊಂಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಆ ಸಮಯದಲ್ಲಿ ವಾದಿ ತಂದೆ ಬದುಕಿದ್ದರು ಎಂದರೆ ನನಗೆ ಗೊತ್ತಿಲ್ಲ. ನಿಡಿ–7 ಅನ್ನು ನಾನು ಈಗಲೇ ನೋಡುತ್ತಿದ್ದೇನೆ ಎಂದರೆ ಸರಿ. ಸದರಿ ದಾಖಲೆಗೆ ಯಾರು ಸಹಿ ಮಾಡಿದ್ದಾರೆ ಎಂದು ನನಗೆ ಗೊತ್ತಿಲ್ಲ. ನಿಡಿ–7 ಕ್ಕೆ ಪ್ರತಿವಾದಿ 1 ಮತ್ತು 3 ರವರು ಸಹಿ ಹಾಕಿಲ್ಲ ಎಂದರೆ ಸರಿ. ನಿಡಿ–7 ರಲ್ಲಿ ಬರೆದಿರುವ ಚಕ್ಕು ಬಂದಿ ಸರಿ ಇಲ್ಲ ಎಂದರೆ ಸರಿಯಲ್ಲ.

ವಾದಿಯವರು ವಾದ ಪತ್ರದಲ್ಲಿ ಹೇಳಿರುವ ಎಲ್ಲಾ ವಿಚಾರಗಳು ನನಗೆ ಗೊತ್ತಿಲ್ಲ . ನಾನು ಮತ್ತು ಇತರೆ ಪ್ರತಿವಾದಿಗಳು ನಿಡಿ–7 ಅನ್ನು ಸೃಷ್ಟಿ ಮಾಡಿದ್ದೇವೆ ಎಂದರೆ ಸರಿಯಲ್ಲ. ನಿಡಿ–24 ಸ್ವತ್ತನ್ನು ನನಗೆ ಬರೆಯುವಾಗ ತೋರಿಸಿಲ್ಲ ಎಂದರೆ ಸರಿ. ದಾನ ಪತ್ರ, ಖಾತೆ ಹಾಗೂ ಎಂ.ಆರ್. ಪ್ರಕಾರ ನಾನು ಸ್ವಾಧಿನದಲ್ಲಿದ್ದೇನೆ. ನಾನು ಸ್ವಾಧೀನದಲ್ಲಿಲ್ಲ ಎಂದರೆ ಸರಿಯಲ್ಲ. ನಿಡಿ–7 ರ ಪ್ರಕಾರ ಪಂಚಾಯಿತಿ ಅಧಿಕಾರಗಳೊಂದಿಗೆ ಶಾಮಿಳಾಗಿ ಖಾತೆ ಮಾಡಿಸಿಕೊಂಡಿದ್ದೇವೆ ಎಂದರೆ ಸರಿಯಲ್ಲ. ನನ್ನ ತಾಯಿ ಮತ್ತು ತಂದೆಯವರು ಹೇಳಿದ ಪ್ರಕಾರ ನಾನು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿರುವ ವಿಚಾರಗಳನ್ನು ನಾನು ತಿಳಿದುಕೊಂಡಿಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯಾದಲ್ಲಿ ಸಾಕ್ಷಿಯ ಹೇಳಿಕೆಯಂತೆ ಕಂಪ್ಯೂಟರೀಕರಣಗೊಳಿಸಿ ಪ್ರಿಂಟ್ ತೆಗೆಯಲಾಯಿತು.)

ಓ. ಹೇ. ಕೇ. ಸರಿ. ಇದೆ.

ಸಹಿ/–

ಅಧಿಕ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಶಿರಾ.